MARCH, 2026 VOL . 10 ISSUE 04



# E - STREET VOICE

## ಅಂತರಾಷ್ಟ್ರೀಯ ಮಹಿಳಾ ದಿನ ೨೦೨೬: ಜಾಗೃತಿಯಿಂದ ಕಾರ್ಯದತ್ತ

ಪ್ರತಿ ವರ್ಷ ಮಾರ್ಚ್ ೮ರಂದು, ಜಗತ್ತು ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಒಂದಾಗುತ್ತದೆ. ಇದು ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಗೌರವಿಸುವ ದಿನವಾಗಿದ್ದು, ಜೊತೆಗೆ ಲಿಂಗ ಸಮಾನತೆಗೆ ಶಕ್ತಿಯುತ ಕರೆ ನೀಡುವ ದಿನವೂ ಆಗಿದೆ. ಈ ವರುಷದ ಸ್ಪಷ್ಟ ಸಂದೇಶ: ಕೇವಲ ಜಾಗೃತಿ ಸಾಕಾಗುವುದಿಲ್ಲ; ಸಾಂಘಿಕ ಕಾರ್ಯ ಮತ್ತು ಜವಾಬ್ದಾರಿಯ ಹಂಚಿಕಾ ಸಮಯ ಇದಾಗಿದೆ.

ವಿಶ್ವ ಸಂಸ್ಥೆ ನೀಡಿರುವ "ಎಲ್ಲಾ ಮಹಿಳೆಯರು ಮತ್ತು ಬಾಲಕೀಯರಿಗಾಗಿ ಹಕ್ಕು, ನ್ಯಾಯ ಮತ್ತು ಕ್ರಿಯೆ" ಎಂಬ ಧ್ಯೇಯೋದ್ದೇಶ ಸಮಾನತೆ ಸಮಾವೇಶಕಾರಿ ಮತ್ತು ವ್ಯಾಪಕವಾಗಿರಬೇಕೆಂದು ನೆನಪಿಸುತ್ತದೆ. ಇದು ಮಹಿಳೆಯರು ಮತ್ತು ಹುಡುಗಿಯರು, ವಿಶೇಷವಾಗಿ ಸಮಾಜದ ಅಂಚಿನಲ್ಲಿರುವವರು, ಯಾವುದೇ ಭೇದಭಾವವಿಲ್ಲದೆ ತಮ್ಮ ಹಕ್ಕುಗಳನ್ನು ಸಂಪೂರ್ಣವಾಗಿ ಪಡೆಯುವಂತೆ ಮಾಡುವ ಶಕ್ತಿಯುತ ವ್ಯವಸ್ಥೆಗಳ ನಿರ್ಮಾಣದ ಅಗತ್ಯವಿದೆ ಎಂದು ಸೂಚಿಸುತ್ತದೆ. ನ್ಯಾಯವು ಕೇವಲ ಆದರ್ಶವಾಗಿರಬಾರದು; ಅದು ದಿನನಿತ್ಯದ ಜೀವನದಲ್ಲಿ ಅನುಭವವಾಗಬೇಕು.

ಇದಕ್ಕೆ ಪೂರಕವಾಗಿ, "ಗಿವ್ ಟು ಗೇನ್" ಎಂಬ ಅಂತರಾಷ್ಟ್ರೀಯ ಮಹಿಳಾ ದಿನದ ಅಭಿಯಾನ ಹೊಸ ದೃಷ್ಟಿಕೋನವನ್ನು ಪರಿಚಯಿಸುತ್ತದೆ. ಲಿಂಗ ಸಮಾನತೆಯನ್ನು ಸಾಧಿಸಲು ಉದಾರ ಮನೋಭಾವದ ಅಗತ್ಯವಿದೆ. ಅವಕಾಶಗಳು, ಸಂಪನ್ಮೂಲಗಳು ಮತ್ತು ಬೆಂಬಲವನ್ನು ಹಂಚಿಕೊಳ್ಳುವುದು ಮುಖ್ಯ. ಪ್ರಗತಿ ಸ್ಪರ್ಧೆಯಲ್ಲ, ಅದು ಸಹಕಾರವಾಗಿದೆ; ಇತರರನ್ನು ಶಕ್ತಿಗೊಳಿಸುವುದಲ್ಲದೇ ಸಮಾಜವನ್ನು ಒಟ್ಟಾರೆಯಾಗಿ ಬಲಪಡಿಸುತ್ತದೆ.

ಅಂತರಾಷ್ಟ್ರೀಯ ಮಹಿಳಾ ದಿನದ ಮಹತ್ವವು ಇತಿಹಾಸದಲ್ಲಿ ಆಳವಾಗಿ ನೆಲೆಯೂರಿದೆ. ಇದು ೨೦ನೇ ಶತಮಾನದ ಆರಂಭದ ಕಾರ್ಮಿಕ ಚಳವಳಿಗಳಿಂದ ಉದ್ಭವಿಸಿ, ೧೯೭೫ರಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟಿತು. ಇಂದು ಇದು ಸಂಭ್ರದಾಚರಣೆಯ ದಿನವಾಗಿಯೂ, ನಾವು ಎಷ್ಟು ದೂರ ಬಂದಿದ್ದೇವೆ ಮತ್ತು ಇನ್ನೂ ಎಷ್ಟು ದೂರ ಹೋಗಬೇಕಿದೆ ಎಂಬುದನ್ನು ನೆನಪಿಸುವ ದಿನವಾಗಿಯೂ ಉಳಿದಿದೆ.

ಪ್ರಗತಿಯಿದ್ದರೂ, ಗಂಭೀರ ಸವಾಲುಗಳು ಇನ್ನೂ ಮುಂದುವರಿದಿವೆ. ಮಹಿಳೆಯರ ಮೇಲಿನ ಹಿಂಸಾಚಾರ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಅಸಮಾನ ಪ್ರವೇಶ, ಮತ್ತು ಆರೋಗ್ಯ ಸೇವೆಗಳ ಅಡೆತಡೆಗಳು ಇನ್ನೂ ವಿಶ್ವದ ಲಕ್ಷಾಂತರ ಮಹಿಳೆಯರು ಮತ್ತು ಬಾಲಕೀಯರ ಮೇಲೆ ಪರಿಣಾಮ ಬೀರುತ್ತಿವೆ. ಈ ಸಮಸ್ಯೆಗಳನ್ನು ಪರಿಹರಿಸಲು ಕೇವಲ ಕಾನೂನು ಬದಲಾವಣೆಗಳು ಸಾಕಾಗುವುದಿಲ್ಲ; ಸಮುದಾಯಗಳು, ಸಂಸ್ಥೆಗಳು ಮತ್ತು ವ್ಯಕ್ತಿಗಳ ಸಕ್ರಿಯ ಭಾಗವಹಿಸುವಿಕೆಯೂ ಅಗತ್ಯವಿದೆ.

ಈ ದಿನದ ಬಣ್ಣಗಳು, ಗೌರವ ಮತ್ತು ನ್ಯಾಯವನ್ನು ಸೂಚಿಸುವ ನೇರಳೆ, ಆಶೆಯನ್ನು ಸೂಚಿಸುವ ಹಸಿರು, ಮತ್ತು ಶುದ್ಧತೆಯನ್ನು ಸೂಚಿಸುವ ಬಿಳಿ, ಒಂದು ಸಮಾನತೆಯ ವಿಶ್ವದ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ. ಆದರೆ ಸಂಕೇತಗಳು ಮಾತ್ರ ಬದಲಾವಣೆಯನ್ನು ತರಲಾರವು. ನಿಜವಾದ ಪರಿವರ್ತನೆ, ಜಾಗೃತಿ ಮೂಡಿಸುವುದರಿಂದಲೂ, ಹಕ್ಕುಗಳಿಗಾಗಿ ಹೋರಾಡುವುದರಿಂದಲೂ, ಪರಸ್ಪರ ಬೆಂಬಲಿಸುವುದರಿಂದಲೂ ಮತ್ತು ವ್ಯವಸ್ಥೆಗಳನ್ನು ಹೊಣೆಗಾರಿಕೆಗೆ ಒಳಪಡಿಸುವುದರ ಮುಖೇನವೂ ಸಾಧ್ಯವಾಗುತ್ತದೆ.

ಈ ವರುಷ ಅಂತರಾಷ್ಟ್ರೀಯ ಮಹಿಳಾ ದಿನೋತ್ಸವವನ್ನು ಆಚರಿಸುವ ಈ ಸಂದರ್ಭದಲ್ಲಿ, ಸಂಭ್ರಮದಿಂದ ಬದ್ಧತೆಯತ್ತ ನಾವು ಸಾಗೋಣ. ನಾವು ಕೇವಲ ಆಚರಣೆಗೆ ಒತ್ತು ನೀಡದೆ ಬದ್ಧತೆಯತ್ತಲೂ ಸಾಗೋಣ. ನಾವು ಮಹಿಳೆಯರನ್ನು ಪ್ರೇರೇಪಿಸಲು, ಬೆಂಬಲಿಸಲು ಮತ್ತು ಸಶಕ್ತರನ್ನಾಗಿ ರೂಪಿಸಲು ಎಲ್ಲರೊಂದಿಗೆ ಕೈಜೋಡಿಸೋಣ. ಹೀಗೆ ನಾವು ಎಲ್ಲರೂ ಒಟ್ಟಾದರೆ ಎಲ್ಲಾ ಮಹಿಳೆಯರು ಮತ್ತು ಬಾಲಕಿಯರಿಗಾಗಿ ಸಮಾನತೆ ಕೇವಲ ಕನಸಾಗಿರದೆ, ವಾಸ್ತವವಾಗುವ ಭವಿಷ್ಯವನ್ನು ನಿರ್ಮಿಸಬಹುದು.

ಫಾ. ಕೆ.ಜೆ. ಜೋಸೆಫ್, ಎಸ್‌ಡಿಬಿ

# ಬೀದಿ ಉಪಸ್ಥಿತಿ



### ಬೊಸ್ಕೊ ನಿವಾಸ್

ಮಾರ್ಚ್ ೧೮, ೨೦೨೬ರಂದು ಕೇಂದ್ರದಲ್ಲಿ ೧೮ ಪೋಷಕರಿಗಾಗಿ ಸಭೆ ನಡೆಸಿ, ಮಕ್ಕಳ ಶಾಲಾ ಪ್ರಗತಿ ಹಾಗೂ ಪರೀಕ್ಷೆಗಳ ಸಮಯದಲ್ಲಿ ಅವರ ಬಗ್ಗೆ ಸೂಕ್ತ ಕಾಳಜಿ ವಹಿಸುವ ಅಗತ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು.



### .ಬೊಸ್ಕೊ ನಿಲಯ

ಅಧ್ಯಯನ ಕೇಂದ್ರದ ಮಕ್ಕಳು ಮತ್ತು ಕಂಪ್ಯೂಟರ್ ತರಬೇತಿ ಪಡೆಯುತ್ತಿರುವ ಮಕ್ಕಳಿಗಾಗಿ ಕಿಶೋರಿಯರ ಸಭೆಗಳು ತಿಂಗಳಾದ್ಯಂತ ನಡೆಸಲಾಯಿತು.



### ಬಸ್ ನಿಲ್ದಾಣ

ಮಾರ್ಚ್ ೧೩, ೨೦೨೬ರಂದು ಕೆಎಸ್‌ಆರ್‌ಟಿಸಿ ಟರ್ಮಿನಲ್ ೨ರಲ್ಲಿ ಸಾರ್ವಜನಿಕರಿಗೆ ಮಕ್ಕಳ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಿ, ಬಾಲಕಾರ್ಮಿಕತೆ, ಮಾನವ ಕಳ್ಳಸಾಗಣೆ ಮತ್ತು ಕಾಣೆಯಾದ ಮಕ್ಕಳಂತಹ ಅಪಾಯಗಳಿಂದ ರಕ್ಷಣೆ ಕುರಿತು ಮಾಹಿತಿ ನೀಡಲಾಯಿತು.



### ಮಾಗಡಿ ರಸ್ತೆ

ಮಾರ್ಚ್ ೧೮, ೨೦೨೬ರಂದು ಕಡಪಸ್ವಾಮಿ ಮಠದ ಶಾಲೆಯ ಸಿಆರ್‌ಸಿ ಸದಸ್ಯರಿಗಾಗಿ ಸಿಎಸ್‌ಎನ್ ತಂಡದ ಸಹಯೋಗದಲ್ಲಿ ಸಿಆರ್‌ಸಿ ಸಭೆ ನಡೆಸಲಾಯಿತು.

## ಗಾಂಧಿ ನಗರ ಪ್ರದೇಶ

ಮಾರ್ಚ್ ೧೭, ೨೦೨೬ರಂದು ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣಾ ವ್ಯವಸ್ಥೆಗಳು ಹಾಗೂ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡು, ಕರಪತ್ರಗಳನ್ನು ವಿತರಿಸಲಾಯಿತು.




# ಘಟಕಗಳು

## ಸಿ.ಎಸ್.ಎನ್.

ಮಾರ್ಚ್ ೨೩, ೨೦೨೬ರಂದು ಎಮ್‌ಸಿಟಿಸಿ ಕ್ವಾರ್ಟರ್ಸ್‌ನಲ್ಲಿ ಸಮುದಾಯ ಸದಸ್ಯರ ನಡುವೆ ಮಕ್ಕಳ ಸಂಬಂಧಿತ ಸಮಸ್ಯೆಗಳ ಪರಿಹಾರದಲ್ಲಿ ಸಹಭಾಗಿತ್ವದ ಜವಾಬ್ದಾರಿಯನ್ನು ಬೆಳೆಸುವ ಉದ್ದೇಶದಿಂದ ಕೇರಿಂಗ್ ಕಮ್ಯೂನಿಟಿ ಗ್ರೂಪ್ ಸಭೆ ಆಯೋಜಿಸಲಾಯಿತು.



## ಫೋಸ್ಟರ್ ಕೇರ್

ಮಾರ್ಚ್ ೧೦, ೨೦೨೬ರಂದು ಚಾಮರಾಜಪೇಟೆಯ GKEMPS ಹೈಸ್ಕೂಲ್‌ನಲ್ಲಿ ನಡೆದ ಸಿಂಚನಾ ತರಬೇತಿ ಕಾರ್ಯಕ್ರಮದ ವೇಳೆ ದಕ್ಷಿಣ ವಿಭಾಗದ ಎಲ್ಲಾ ಹೈಸ್ಕೂಲ್‌ಗಳ ೧೦೦ ಮುಖ್ಯ ಶಿಕ್ಷಕಿಯರಿಗೆ ಫೋಸ್ಟರ್ ಕೇರ್ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.



## ಆರೋಗ್ಯ ಕಾರ್ಯಕ್ರಮ

ಮಾರ್ಚ್ ೧೬, ೨೦೨೬ರಂದು ಬಂಗಾರಪ್ಪ ಗುಡ್ಡೆಯಲ್ಲಿ ವಲಸೆ ಸಮುದಾಯದವರಿಗೆ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದ್ದು, ೬೨ ವಲಸಿಗರು ಮತ್ತು ಅವರ ಮಕ್ಕಳು ಅದರ ಪ್ರಯೋಜನ ಪಡೆಯಲು ಸಾಧ್ಯವಾಯಿತು.



## ಕುಟುಂಬ ಪುನಃಸ್ಥಾಪನೆ ಮತ್ತು ಆಫ್ಟರ್ ಕೇರ್

ಕುಟುಂಬಗಳಿಗೆ ಮರಳಿಸಲ್ಪಟ್ಟ ಮಕ್ಕಳ ಹಾಗೂ ಆಫ್ಟರ್ ಕೇರ್‌ನಲ್ಲಿರುವ ಮಕ್ಕಳ ಪೋಷಕರೊಂದಿಗೆ ಸಭೆಯನ್ನು ಬೊಸ್ಕೊ ಯುವಕೇಂದ್ರದಲ್ಲಿ ನಡೆಸಲಾಯಿತು.



## ವಲಸೆ ಸಹಾಯ ಡೆಸ್ಕ್

ಮಾರ್ಚ್ ೨೦೨೬ರ ಅವಧಿಯಲ್ಲಿ ವಲಸಿಗ ಕುಟುಂಬಗಳಿಗೆ ಸೌರ ದೀಪಗಳನ್ನು ವಿತರಿಸಲಾಯಿತು.



## ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ಕಾರ್ಯಕ್ರಮ

ಮಾರ್ಚ್ ೨೦, ೨೦೨೬ರಂದು ಮಡಿವಾಳದ ಆಬ್ಸರ್ವೇಷನ್ ಹೋಮ್‌ನಲ್ಲಿರುವ ಮಕ್ಕಳಿಗಾಗಿ ಡಾ. ಗುರುರಾಜ್ ಕರಜಗಿ ಅವರ ಪ್ರೇರಣಾದಾಯಕ ಭಾಷಣಗಳನ್ನು ವಿಡಿಯೊ ಮುಖಾಂತರ ಪ್ರದರ್ಶಿಸಲಾಯಿತು



## ಮಾನವ ಸಂಪನ್ಮೂಲ ಅಭಿವೃದ್ಧಿ

ಮಾರ್ಚ್ ೩, ೨೦೨೬ರಂದು ಕ್ರೈಸ್ಟ್ ಕಾಲೇಜಿನ ವಿದ್ಯಾರ್ಥಿಗಳಿಗೆ ಒರಿಯಂಟೇಷನ್ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



### ಆರ್‌ಎಮ್‌ಟಿ

ಮಾರ್ಚ್ ೨೪, ೨೦೨೫ರಂದು ಬೊಸ್ಕೊ ಯುವಕೇಂದ್ರದ ಯುವಕರಿಗಾಗಿ ತಾಜ್ ಹೋಟೆಲ್ ತಂಡದಿಂದ ಚಿತ್ರಕಲೆ ಸ್ಪರ್ಧೆ, ಹೂಗುಚ್ಛ ತಯಾರಿಸುವ ಮತ್ತು ನ್ಯಾಪ್ಕಿನ್ ತಯಾರಿಸುವ ಚಟುವಟಿಕೆಗಳನ್ನು ಆಯೋಜಿಸಲಾಯಿತು.



# ಮಕ್ಕಳ ಆರೈಕೆ ಸಂಸ್ಥೆಗಳು

### ಬೊಸ್ಕೊ ಮನೆ

ಮಾರ್ಚ್ ೧೩, ೨೦೨೫ರಂದು ಕರ್ನಾಟಕ ರೆಟಿನಾ ಸಂಸ್ಥೆಯ ಸಹಯೋಗದಲ್ಲಿ ವಿಶೇಷ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸಿ, ಮಕ್ಕಳಲ್ಲಿ ದೃಷ್ಟಿ ಸಮಸ್ಯೆಗಳ ಪ್ರಾಥಮಿಕ ಪತ್ತೆ ಮತ್ತು ತಜ್ಞರ ಸಲಹೆ ಒದಗಿಸಲಾಯಿತು.



### ಬೊಸ್ಕೊ ವಿಕಾಸ್

ಮಾರ್ಚ್ ೧೪, ೨೦೨೫ರಂದು ಸ್ವರ್ಗ ರಾಣಿ ಶಾಲೆಯ ವಿದ್ಯಾರ್ಥಿಗಳು ಭೇಟಿ ನೀಡಿ, ಮಕ್ಕಳೊಂದಿಗೆ ವಾಲಿಬಾಲ್ ಪಂದ್ಯದಲ್ಲಿ ಭಾಗವಹಿಸಿ, ಪರಸ್ಪರ ಸಂವಹನ ಮತ್ತು ಕ್ರೀಡಾ ಮನೋಭಾವವನ್ನು ಉತ್ತೇಜಿಸಿದರು



### ಬೊಸ್ಕೊ ರೇನ್‌ಬೋ ಹೋಮ್

ಮಾರ್ಚ್ ೧೧, ೨೦೨೫ರಂದು ಅಭಿಜೀತ್ ಅವರ ನೇತೃತ್ವದ ಟ್ಯಾಲಿ ಪ್ರೈಮ್ ತಂಡ ಭೇಟಿ ನೀಡಿ, ಮಕ್ಕಳಿಗೆ ಗಿಫ್ಟ್ ಹ್ಯಾಂಪರ್‌ಗಳನ್ನು ವಿತರಿಸಿದರು.



## ಬೊಸ್ಕೊ ವಾತ್ಸಲ್ಯ ಭವನ

ಮಾರ್ಚ್ ೯, ೨೦೨೬ರಂದು ಅಂತರರಾಷ್ಟ್ರೀಯ ಮಹಿಳಾ ದಿನೋತ್ಸವನ್ನು ಆಚರಿಸಲಾಯಿತು.




## ಬೊಸ್ಕೊ ಸುಮ್ಮನಹಳ್ಳಿ

ಮಾರ್ಚ್ ೨೭, ೨೦೨೬ರಂದು ಬೊಸ್ಕೊ ಹೋಮ್‌ಲಿಂಕ್ ವಿಭಾಗದ ಸಂಯೋಜಕರಾದ ಜಾನ್ ಜೋಶುವಾ ಅವರು ತರಬೇತಿದಾರರಿಗೆ ಕೃತಕ ಬುದ್ಧಿಮತ್ತೆ (AI) ಕುರಿತು ತರಬೇತಿ ನೀಡಿದರು.



## ಬೊಸ್ಕೊ ಯುವಕೇಂದ್ರ

ಮಾರ್ಚ್ ೧೮, ೨೦೨೬ರಂದು ಎನ್‌ಫೋಲ್ಡ್ ಸ್ವಯಂಸೇವಕರಿಂದ ಸಮಸ್ಯೆ ಪರಿಹಾರ ಕೌಶಲ್ಯದ ಕುರಿತು ಜೀವನ ಕೌಶಲ್ಯ ಕಾರ್ಯಕ್ರಮ ನಡೆಸಲಾಯಿತು.



## ಬೊಸ್ಕೊ ಯುವೋದಯ

ಮಾರ್ಚ್ ೩೧, ೨೦೨೬ರಂದು ಓಪನ್ ಶೆಲ್ಟರ್‌ನಲ್ಲಿರುವ ಮಕ್ಕಳ ಪೋಷಕರಿಗೆ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು.



## ಪ್ರತಿಭೆ ಅಭಿವೃದ್ಧಿ ಮತ್ತು ಮನರಂಜನಾ ಕಾರ್ಯಕ್ರಮ



ವಲಸೆ ಸಹಾಯಕ ಡೆಸ್ಕ್ ತಂಡವು ೨೦೨೫ರ ಮಾರ್ಚ್ ೩ರಂದು ಹೊರಮಾವು ಅಗರದಲ್ಲಿ ಯಾದವ ಸಮುದಾಯಕ್ಕಾಗಿ ಪ್ರತಿಭೆ ವರ್ಧನೆ ಮತ್ತು ಮನರಂಜನಾ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಯುವಕರಿಗೆ ಕ್ರಿಕೆಟ್ ಪಂದ್ಯಾವಳಿ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಮತ್ತು ಸಮುದಾಯದ ಇತರ ಸದಸ್ಯರಿಗೆ ವಿವಿಧ ಗುಂಪು ಆಟಗಲೂ ಇದ್ದವು. ಫಾ. ದೀಪು, ವಲಸೆ ಸಹಾಯ ಡೆಸ್ಕ್ ಯೋಜನೆಯ ನಿರ್ದೇಶಕರು ಬಹುಮಾನಗಳನ್ನು ವಿತರಿಸಿದರು. ಒಟ್ಟು ೨೦೦ ವಲಸಿಗರು ಮತ್ತು ಮಕ್ಕಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

## ಓರಿಯಂಟೇಶನ್ ಪ್ರೊಗ್ರಾಂ



೨೦೨೫ರ ಮಾರ್ಚ್ ೩ರಂದು ಬೊಸ್ಕೊ ಯುವೋದಯದಲ್ಲಿ ಕ್ರೈಸ್ಟ್ ವಿಶ್ವವಿದ್ಯಾಲಯದ ಸಮಾಜ ಸೇವಾ ವಿಭಾಗ ಮತ್ತು ಮರಿಯಮ್ ನಿಲಯ ನೊವಿಷಿಯೇಟ್‌ನ ವಿದ್ಯಾರ್ಥಿಗಳಿಗೆ ಓರಿಯೆಂಟೇಶನ್ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ ಅವರು ಬೊಸ್ಕೊ ಸೇವಾ ಸಂಸ್ಥೆ ಮತ್ತು ಅದರ ವಿವಿಧ ಚಟುವಟಿಕೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಅವರು ಬೊಸ್ಕೊ ಬೆಂಗಳೂರಿನ ಇತಿಹಾಸ, ಅದರ ಮುನ್ನೋಟ ಮತ್ತು ಧ್ಯೇಯವನ್ನು ವಿವರಿಸಿದರು ಮತ್ತು ಪಿಪಿಟಿ ಪ್ರಸ್ತುತಿಯ ಮೂಲಕ ವಿವಿಧ ಕಾರ್ಯಕ್ರಮಗಳು ಮತ್ತು ಯೋಜನೆಗಳ ಬಗ್ಗೆ ವಿವರಿಸಿದರು.

ಬೊಸ್ಕೊ ಯುವೋದಯದ ಸಂಯೋಜಕರಾದ ಶ್ರೀ ರಾಮಸ್ವಾಮಿ ಅವರು ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಮಕ್ಕಳ ರಕ್ಷಣೆ ಮತ್ತು ಪುನರ್ವಸತಿ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಪೋಷಕತ್ವ ಮತ್ತು ಬಾಲಕೀಯರ ಬಗ್ಗೆ ವೀಡಿಯೊಗಳನ್ನು ತೋರಿಸಲಾಯಿತು.

ಪ್ರಾಯೋಗಿಕ ತಿಳುವಳಿಕೆಯನ್ನು ಪಡೆಯಲು ವಿದ್ಯಾರ್ಥಿಗಳು ಸಿಬ್ಬಂದಿ ಮತ್ತು ಮಕ್ಕಳೊಂದಿಗೆ ಸಂವಾದ ನಡೆಸಿದರು. ಭಾರತದಲ್ಲಿ, ವಿಶೇಷವಾಗಿ ಮಕ್ಕಳ ಆರೈಕೆ ಸಂಸ್ಥೆಗಳು ಮತ್ತು ಸಾಂಸ್ಥಿಕ ಕಾರ್ಯಚಟುವಟಿಕೆಗಳ ಸಂದರ್ಭದಲ್ಲಿ ಸಾಮಾಜಿಕ ಕಾರ್ಯವನ್ನು ಅರ್ಥಮಾಡಿಕೊಳ್ಳಲು ಅವರು ಮಾನವ ಸಂಪನ್ಮೂಲ ಕಾರ್ಯನಿರ್ವಾಹಕ ಶ್ರೀ ನಿಯಾನ್ ಅವರೊಂದಿಗೆ ಸಂವಾದ ನಡೆಸಿದರು.

ಓರಿಯೆಂಟೇಶನ್ ಪ್ರೊಗ್ರಾಂ ಸಂಸ್ಥೆಯ ಗುರಿಗಳು ಮತ್ತು ಉದ್ದೇಶಗಳನ್ನು ಸ್ಪಷ್ಟಪಡಿಸಿತು ಮತ್ತು ಬೊಸ್ಕೊ ಜಾರಿಗೆ ತಂದ ಕಾರ್ಯಕ್ರಮಗಳು ಮತ್ತು ಯೋಜನೆಗಳ ಬಗ್ಗೆ ಪ್ರಾಯೋಗಿಕ ಒಳನೋಟಗಳನ್ನು ಒದಗಿಸಿತು.

ಭಾಗವಹಿಸಿದವರಲ್ಲಿ ಕ್ರೈಸ್ಟ್ ವಿಶ್ವವಿದ್ಯಾಲಯದ ಸಮಾಜಸೇವಾ ವಿಭಾಗದ ವಿದ್ಯಾರ್ಥಿಗಳು ಸೇರಿದ್ದರು. ಇವರಲ್ಲಿ ೧೦ ವಿದೇಶಿ ವಿದ್ಯಾರ್ಥಿಗಳು, ೧ ಬೋಧಕವರ್ಗದ ಸದಸ್ಯರು ಮತ್ತು ಮರಿಯಮ್ ನಿಲಯ ನೊವಿಷಿಯೇಟ್‌ನ ೪ ವಿದ್ಯಾರ್ಥಿಗಳು ಸೇರಿದ್ದರು. ಈ ಭೇಟಿಯು ಅವರ ಶೈಕ್ಷಣಿಕ ಅನುಭವ ಮತ್ತು ಕ್ಷೇತ್ರ ಕಲಿಕಾ ಕಾರ್ಯಕ್ರಮದ ಭಾಗವಾಗಿತ್ತು.

## ಮಕ್ಕಳ ಸುರಕ್ಷತಾ ಸಮುದಾಯ ಪಡೆಗಳ ಸಭೆ

ಮಕ್ಕಳ ಸುರಕ್ಷತಾ ಆರೈಕೆ ಸಮುದಾಯ ಪಡೆಯನ್ನು ಬಲಪಡಿಸಲು ಮತ್ತು ಕಳೆದ ವರ್ಷ ನಡೆಸಿದ ಚಟುವಟಿಕೆಗಳನ್ನು ಪರಿಶೀಲಿಸಲು ೨೦೨೪ರ ಮಾರ್ಚ್ ೫ರಂದು ಗಾಂಧಿನಗರದಲ್ಲಿನ ಬೊಸ್ಕೊ ಯುವೋದಯದಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯು ಗಾಂಧಿನಗರವನ್ನು ಬಾಲಕಾರ್ಮಿಕ ಮುಕ್ತ ವಲಯವನ್ನಾಗಿ ಮಾಡುವಲ್ಲಿ ಸಾಮೂಹಿಕ ಸಮುದಾಯದ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದ್ದು, ಬಾಲಕಾರ್ಮಿಕತೆಯನ್ನು ತಡೆಗಟ್ಟಲು ಮತ್ತು ಮಕ್ಕಳ ಹಕ್ಕುಗಳನ್ನು ಉತ್ತೇಜಿಸಲು ಭವಿಷ್ಯದ ಕ್ರಮಗಳನ್ನು ಯೋಜಿಸುವ ನಿಟ್ಟಿನಲ್ಲಿ ಏರ್ಪಡಿಸಲಾಗಿತ್ತು.
ಬೊಸ್ಕೊ ಬೆಂಗಳೂರಿನ ಕಾರ್ಯಕಾರಿ ನಿರ್ದೇಶಕ, ಫಾ. ವರ್ಗೀಸ್ ಪಲ್ಲಿಪುರಂ ಸಭಿಕರನ್ನುದ್ದೇಶಿಸಿ, ಮಕ್ಕಳ ಸ್ನೇಹಿ ಸಮುದಾಯಗಳನ್ನು ನಿರ್ಮಿಸುವ ಮಹತ್ವದ ಬಗ್ಗೆ ಮಾತನಾಡಿದರು. ಮಕ್ಕಳ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಾತ್ರಿಪಡಿಸುವುದು ಇಡೀ ಸಮುದಾಯದ ಜವಾಬ್ದಾರಿಯಾಗಿದೆ ಎಂದು ಅವರು ಒತ್ತಿ ಹೇಳಿದರು. ಗಾಂಧಿನಗರವನ್ನು ಬಾಲಕಾರ್ಮಿಕ ಮುಕ್ತ ವಲಯವನ್ನಾಗಿ ಮಾಡಲು ನಡೆಯುತ್ತಿರುವ ಉಪಕ್ರಮವನ್ನು ಅವರು ಒತ್ತಿ ಹೇಳಿದರು. ಕಾರ್ಯಕ್ರಮದಿಂದ ತಮ್ಮ ನಿರೀಕ್ಷೆಗಳನ್ನು ಹಂಚಿಕೊಳ್ಳಲು ಭಾಗವಹಿಸುವವರನ್ನು ಆಹ್ವಾನಿಸಲಾಯಿತು.




ಜಾಗೃತಿ ಕಾರ್ಯಕ್ರಮಗಳು, ತಾಯಂದಿರ ಸಭೆಗಳು, ಶಾಲಾ ದಾಖಲಾತಿ ಬೆಂಬಲ ಮತ್ತು ವಿವಿಧ ಸಮುದಾಯ ಸಂಪರ್ಕ ಉಪಕ್ರಮಗಳು ಸೇರಿದಂತೆ ಹಿಂದಿನ ವರ್ಷದ ಚಟುವಟಿಕೆಗಳ ಸಂಕ್ಷಿಪ್ತ ಅವಲೋಕನವನ್ನು ಪ್ರಸ್ತುತಪಡಿಸಲಾಯಿತು. ಬೊಸ್ಕೊ ಯುವೋದಯದ ನಿರ್ದೇಶಕರಾದ ಫಾ. ಜಾನ್ಸನ್ ಅವರು ಮುಂದಿನ ಹಾದಿಯನ್ನು ವಿವರಿಸಿದರು ಮತ್ತು ಮುಂಬರುವ ಪ್ರಯತ್ನಗಳಲ್ಲಿ ಸಮುದಾಯದ ನಿರಂತರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಿದರು.

ಈ ಸಭೆಯು ಬೊಸ್ಕೊ ಸಿಬ್ಬಂದಿ ಮತ್ತು ಸಮುದಾಯದ ಸದಸ್ಯರ ನಡುವಿನ  ಸಹಯೋಗವನ್ನು ಬಲಪಡಿಸಲು ಸಹಾಯ ಮಾಡಿತು. ಭಾಗವಹಿಸಿದವರು ಇಲ್ಲಿಯವರೆಗೆ ಕೈಗೊಂಡ ಕಾರ್ಯಗಳನ್ನು ಶ್ಲಾಘಿಸಿದರು ಮತ್ತು ಭವಿಷ್ಯದ ಉಪಕ್ರಮಗಳನ್ನು ಸಕ್ರಿಯವಾಗಿ ಬೆಂಬಲಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಮಕ್ಕಳ ಸುರಕ್ಷತಾ ಸಮುದಾಯ ಪಡೆಯ ಒಟ್ಟು ಹತ್ತು ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

## ಬೊಸ್ಕೊ ಕೇಂದ್ರಗಳಲ್ಲಿ ಅಂತರಾಷ್ಟ್ರೀಯ  ಮಹಿಳಾ ದಿನಾಚರಣೆಯ ಆಚರಣೆಗಳು

ಬೊಸ್ಕೊ ರೇನ್‌ಬೋ ಹೋಮ್, ಸುಮ್ಮನಹಳ್ಳಿ, ವಾತ್ಸಲ್ಯ ಭವನ, ಮಾಗಡಿ ರಸ್ತೆ ಪ್ರದೇಶ, ನಿಲಯ, ಮತ್ತು ನಿವಾಸ್ ಕೇಂದ್ರಗಳಲ್ಲಿ ಮಾರ್ಚ್ ೮, ೯, ೨೭ ಮತ್ತು ೨೯ರಂದು "ಗಿವ್ ಟು ಗೇನ್" ಎಂಬ ವಿಷಯದ ಅಡಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು.



ಬೊಸ್ಕೊ ವಾತ್ಸಲ್ಯ ಭವನದಲ್ಲಿ ಮಾರ್ಚ್ ೯ ರಂದು ಮಹಿಳಾ ದಿನೋತ್ಸವವನ್ನು ಆಚರಿಸಲಾಯಿತು. ಜೊತೆಗೆ ಟೈಲರಿಂಗ್ ಮತ್ತು ಬ್ಯೂಟಿಷಿಯನ್ ಟ್ರೇಡ್‌ನ ತರಬೇತಿದಾರರಿಗೆ ಕೋರ್ಸ್ ಪೂರ್ಣಗೊಂಡ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಬೊಸ್ಕೊ ನಿಲಯದಲ್ಲಿ ೨೦ ಕಂಪ್ಯೂಟರ್ ತರಬೇತುದಾರರು ಮಾರ್ಚ್ ೨೭ರಂದು ನಡೆದ ಆಚರಣೆಯ ಸಮಯದಲ್ಲಿ ತಮ್ಮ ಕೋರ್ಸ್ ಪೂರ್ಣಗೊಳಿಸುವ ಪ್ರಮಾಣಪತ್ರಗಳನ್ನು ಪಡೆದರು.

ಈ ಕಾರ್ಯಕ್ರಮದಲ್ಲಿ ಮಕ್ಕಳ ನೃತ್ಯ ಪ್ರದರ್ಶನ ಸೇರಿದಂತೆ ರೋಮಾಂಚಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಇದರಿಂದ ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಮೆರುಗು ಬಂದಂತಾಯಿತು. ಮಕ್ಕಳು ಮತ್ತು ಮಹಿಳೆಯರ ಸಕ್ರೀಯ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಸಂವಾದಾತ್ಮಕ ಅಧಿವೇಶನಗಳು ಮತ್ತು ಆಟೋಟಗಳನ್ನು ಸಹ ನಡೆಸಲಾಯಿತು. ಕೇಕ್ ಕತ್ತರಿಸುವ ಮೂಲಕ ಆಚರಣೆಯು ಮುಕ್ತಾಯಗೊಂಡಿತು.

ನಿರ್ದೇಶಕರು ಸಭಿಕರನ್ನುದ್ದೇಶಿಸಿ ಮಾತನಾಡುತ್ತಾ, ನೀಡುವಿಕೆಯ ಮಹತ್ವ ಮತ್ತು ವೈಯಕ್ತಿಕ ಬೆಳವಣಿಗೆ ಮತ್ತು ಸಮುದಾಯದ ಅಭಿವೃದ್ಧಿಯ ಮೇಲೆ ಅದರ ಪ್ರಭಾವದ ಬಗ್ಗೆ ಸ್ಫೂರ್ತಿದಾಯಕ ಸಂದೇಶಗಳನ್ನು ನೀಡಿದರು.










ಅಕ್ಸೆಂಚರ್ ತಂಡ, ಸಿಸ್ಟರ್ ಸಗಾಯ (ಎಫ್.ಎಸ್.ಐ) ಶ್ರೀಮತಿ ನೆಲ್ಲಿ ಪಿಚರ್ಡ್ (ಸಾಮಾಜಿಕ ಕಾರ್ಯಕರ್ತೆ ಮತ್ತು ಮಾನವತಾವಾದಿ) ಶ್ರೀಮತಿ. ಅಮೃತಾ (ಎಸ್‌ಎಂವಿಟಿ ಪೊಲೀಸ್ ಅಧಿಕಾರಿ) ಶ್ರೀ ಹರೀಶ್ (ಪೊಲೀಸ್ ಅಧಿಕಾರಿ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣ) ಮತ್ತು ಫಾ. ವರ್ಗೀಸ್ ಪಲ್ಲಿಪುರಂ, ಕಾರ್ಯಕಾರಿ ನಿರ್ದೇಶಕರು ಉಪಸ್ಥಿತರಿದ್ದರು.

# ಪ್ರಮಾಣ ಪತ್ರ ವಿತರಣಾ ಸಮಾರಂಭ

ಡಿಸೆಂಬರ್ ೨೦೨೫ ರಿಂದ ಫೆಬ್ರವರಿ ೨೦೨೬ ರವರೆಗೆ ಬೇಸಿಕ್ಸ್ ಆಫ್ ಕಂಪ್ಯೂಟರ್ ಮತ್ತು ಟ್ಯಾಲಿ ಕುರಿತು ಕಂಪ್ಯೂಟರ್ ತರಬೇತಿ ಕೋರ್ಸ್ ಅನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಮಾರ್ಚ್ ೭, ೨೦೨೬ ರಂದು ಬೊಸ್ಕೊ ಮನೆಯಲ್ಲಿ ಕೋರ್ಸ್ ಪೂರ್ಣಗೊಳಿಸುವ ಪ್ರಮಾಣಪತ್ರಗಳನ್ನು ನೀಡಲಾಯಿತು. ಬೊಸ್ಕೊ ಬೆಂಗಳೂರಿನ ಕಾರ್ಯಕಾರಿಣಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ ಅವರು, ಒಬ್ಬರ ಜೀವನದಲ್ಲಿ ಕಂಪ್ಯೂಟರ್ ಪ್ರಮಾಣಪತ್ರ ಮತ್ತು ಜ್ಞಾನವನ್ನು ಪಡೆಯುವ ಮಹತ್ವವನ್ನು ವಿವರಿಸಿದರು. ಅವರು ಬೊಸ್ಕೊ ಚಟುವಟಿಕೆಗಳನ್ನು ಎತ್ತಿ ತೋರಿಸಿದರು ಮತ್ತು ಅವರ ಜ್ಞಾನ ಮತ್ತು ಕೌಶಲ್ಯಗಳನ್ನು ಸುಧಾರಿಸಲು ಮಾರ್ಗದರ್ಶನ ನೀಡಿದರು. ಬೊಸ್ಕೊ ಮನೆಯ ನಿರ್ದೇಶಕ ಫಾ. ಕೆ. ಜೆ. ಜೋಸೆಫ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಒಟ್ಟು ೨೧ ಯುವಜನರು ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಪ್ರಮಾಣಪತ್ರಗಳನ್ನು ಪಡೆದರು.




ಟೈಲರಿಂಗ್ ತರಬೇತಿ ಮತ್ತು ಬ್ಯೂಟಿಷಿಯನ್ ಕೋರ್ಸ್ ಅನ್ನು ಪೂರ್ಣಗೊಳಿಸಿದ ತರಬೇತಿದಾರರಿಗೆ ಮಾರ್ಚ್ ೯, ೨೦೨೬ ರಂದು ಬೊಸ್ಕೊ ವಾತ್ಸಲ್ಯ ಭವನದಿಂದ ಕೋರ್ಸ್ ಪೂರ್ಣಗೊಳಿಸುವ ಪ್ರಮಾಣಪತ್ರಗಳನ್ನು ನೀಡಲಾಯಿತು. ಸಭಿಕರನ್ನುದ್ದೇಶಿಸಿ ಮಾತನಾಡಿದ ಗಣ್ಯರು, ಜೀವನದಲ್ಲಿ ಸವಾಲುಗಳು ಮತ್ತು ತೊಂದರೆಗಳ ಹೊರತಾಗಿಯೂ ತಮ್ಮ ವೃತ್ತಿಜೀವನದಲ್ಲಿ ಪಟ್ಟುಹಿಡಿಯಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು ಮತ್ತು ಪ್ರೊತ್ಸಾಹಿಸಿದರು. ತಮ್ಮ ಗುರಿಗಳ ಬಗೆಗಿನ ತಮ್ಮ ಪರಿಶ್ರಮ ಮತ್ತು ಬದ್ಧತೆಯ ಸಂಕೇತವಾಗಿ ತಮ್ಮ ಪ್ರಮಾಣಪತ್ರಗಳನ್ನು ಹೆಮ್ಮೆಯಿಂದ ಇಟ್ಟುಕೊಳ್ಳುವ ಮಹತ್ವವನ್ನು ಅವರು ಒತ್ತಿ ಹೇಳಿದರು. ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿ, ಅಭಿನಂದಿಸಲಾಯಿತು.



ಬೊಸ್ಕೊ ಬೆಂಗಳೂರಿನ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ, ಬೊಸ್ಕೊ ವಾತ್ಸಲ್ಯ ಭವನದ ನಿರ್ದೇಶಕರಾದ ಶೀಬಾ ಥಾಮಸ್, ಲ್ಯಾಕ್ಮೆ ಪಾಲುದಾರರಾದ ರೂಪಾ, ಲ್ಯಾಕ್ಮೆ ತರಬೇತಿ ಮುಖ್ಯಸ್ಥರಾದ ಪ್ರಾಚಿ ಮತ್ತು ಲ್ಯಾಕ್ಮೆ ಸ್ಕಿನ್ ಸ್ಪೆಷಲಿಸ್ಟ್ ದೀಪಿಕಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಟೈಲರಿಂಗ್ ಟ್ರೇಡ್‌ನ ೪೦ ತರಬೇತುದಾರರಿಗೆ ಮತ್ತು ಬ್ಯೂಟಿಷಿಯನ್ ಕೋರ್ಸ್‌ನ ೧೮ ತರಬೇತಿದಾರರಿಗೆ ಕೋರ್ಸ್ ಪೂರ್ಣಗೊಳಿಸಿದ ಪ್ರಮಾಣಪತ್ರಗಳನ್ನು ನೀಡಲಾಯಿತು.

## ವಧುವಿನ ಮೇಕಪ್ ಸ್ಪರ್ಧೆ

ಬೊಸ್ಕೊ ವಾತ್ಸಲ್ಯ ಭವನ ಬ್ಯೂಟಿಷಿಯನ್ ಕೋರ್ಸ್ ವಿದ್ಯಾರ್ಥಿಗಳಿಗೆ ಮಾರ್ಚ್ ೧೩ರಂದು ಮೇಕಪ್ ಕೌಶಲ್ಯಗಳಲ್ಲಿ ತಮ್ಮ ಸಾಮರ್ಥ್ಯ ವ್ಯಕ್ತಪಡಿಸಲು ಮತ್ತು ಅವರ ಕಲಿಕೆಯ ಬಗ್ಗೆ ಮೌಲ್ಯಮಾಪನ ಮಾಡಲು ವಧುವಿನ ಮೇಕಪ್ ಸ್ಪರ್ಧೆಯನ್ನು ಆಯೋಜಿಸಲಾಯಿತು. ಒಂದು ತಿಂಗಳ ಮೇಕಪ್ ಕೋರ್ಸ್ ಅನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳನ್ನು ಸ್ಪರ್ಧೆಯ ಮೂಲಕ ಮೌಲ್ಯಮಾಪನ ಮಾಡಲಾಯಿತು. ಈ ಕಾರ್ಯಕ್ರಮಕ್ಕಾಗಿ, ವಿದ್ಯಾರ್ಥಿಗಳು ತಮ್ಮ ತರಗತಿಯ ಹೊರಗಿನ ತರಬೇತಿದಾರರನ್ನು ನೇಮಿಸಿಕೊಂಡರು ಮತ್ತು ವಿವಿಧ ರೀತಿಯ ವಧುವಿನ ನೋಟವನ್ನು ಸೃಷ್ಟಿಸುವ ಮೂಲಕ ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸಿದರು.



ವಿವಿಧ ರೀತಿಯ ವಧುಗಳನ್ನು ಆಯ್ಕೆ ಮಾಡಲಾಯಿತು, ಮತ್ತು ಪ್ರತಿ ನೋಟವು ವಿಶಿಷ್ಟವಾದ ಮೇಕಪ್ ಶೈಲಿಗಳು, ಸೀರೆ ವಿನ್ಯಾಸ ಮತ್ತು ಕೇಶವಿನ್ಯಾಸಗಳನ್ನು ಒಳಗೊಂಡಿತ್ತು.

ಭಾಗವಹಿಸಿದವರು ವಧುವಿನ ಶೈಲಿಯ ಎಲ್ಲಾ ಅಂಶಗಳಲ್ಲಿ ತಮ್ಮ ಸೃಜನಶೀಲತೆ ಮತ್ತು ತಾಂತ್ರಿಕ ಕೌಶಲ್ಯಗಳನ್ನು ಪ್ರದರ್ಶಿಸಿದರು. ಅತ್ಯುತ್ತಮ ಮೇಕಪ್, ಅತ್ಯುತ್ತಮ ಕೇಶವಿನ್ಯಾಸ, ಅತ್ಯುತ್ತಮ ಸೀರೆ ಡ್ರೇಪಿಂಗ್ ಮತ್ತು ಒಟ್ಟಾರೆ ಅತ್ಯುತ್ತಮ ವಧುವಿನ ನೋಟ ಸೇರಿದಂತೆ ವಿವಿಧ ವಿಭಾಗಗಳಲ್ಲಿ ವಧುಗಳನ್ನು ನಿರ್ಣಯಿಸಲಾಯಿತು.

ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳ ಪ್ರತಿಭೆ, ಸೃಜನಶೀಲತೆ ಮತ್ತು ಪ್ರಯತ್ನವನ್ನು ಶ್ಲಾಘಿಸಲಾಯಿತು. ಹತ್ತು ತರಬೇತುದಾರರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

## ಬೊಸ್ಕೊ ಮನೆಯಲ್ಲಿ ಪೋಷಕರ ಸಭೆ

ಬೊಸ್ಕೊ ಮನೆ ಮತ್ತು ಬೊಸ್ಕೊ ವಿಕಾಸ್‌ನಲ್ಲಿ ಮಾರ್ಚ ೧೮ ರಂದು ಮಕ್ಕಳ ಪೋಷಕರಿಗಾಗಿ ಸಭೆಯನ್ನು ಆಯೋಜಿಸಿದರು. ಬೇಸಿಗೆ ರಜೆಗೆ ತಮ್ಮ ಮಕ್ಕಳನ್ನು ಮನೆಗೆ ಕಳುಹಿಸುವ ಮೊದಲು ಪೋಷಕರೊಂದಿಗೆ ಸಂವಹನ ನಡೆಸುವುದು, ಕುಟುಂಬ ಬಾಂಧವ್ಯವನ್ನು ಉತ್ತೇಜಿಸುವುದು, ಪೋಷಕರ ಬಗ್ಗೆ ಮಾರ್ಗದರ್ಶನ ನೀಡುವುದು ಮತ್ತು ಮಕ್ಕಳಿಗೆ ಲಭ್ಯವಿರುವ ಸರ್ಕಾರಿ ಲಭ್ಯಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳುವುದು ಈ ಸಭೆಯ ಉದ್ದೇಶವಾಗಿತ್ತು.

ಕೇಂದ್ರ ಸಂಯೋಜಕರಾದ ಮಲ್ಲಿಕಾರ್ಜುನರು ಸಭಿಕರನ್ನುದ್ದೇಶಿಸಿ ಮಾತನಾಡಿ, ಮಕ್ಕಳು ತಮ್ಮ ಕುಟುಂಬದೊಂದಿಗೆ ಇರುವ ಮಹತ್ವವನ್ನು ಒತ್ತಿ ಹೇಳಿದರು. ಅರ್ಥಪೂರ್ಣವಾದ ಕೌಟುಂಬಿಕ ಸಂಬಂಧಗಳನ್ನು ಬೆಳೆಸಲು ಮಕ್ಕಳಿಗೆ ಸಹಾಯ ಮಾಡುವಲ್ಲಿ ಮನೆಯ ವಾತಾವರಣವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂದು ಅವರು ಹೇಳಿದರು. ೨೦೨೬ರ ಏಪ್ರಿಲ್‌ನಲ್ಲಿ ನಿಗದಿಯಾಗಿರುವ ಮುಂಬರುವ ಸಭೆಯ ಬಗ್ಗೆಯೂ ಅವರು ಪೋಷಕರಿಗೆ ಮಾಹಿತಿ ನೀಡಿದರು.




ಶ್ರೀ ಬಾಲರಾಜ್ ಅವರು ಕುಟುಂಬ ಪುನಃಸ್ಥಾಪನೆ ಮತ್ತು ಆರೈಕೆಯ ನಂತರದ ಕಾರ್ಯಕ್ರಮದ ಬಗ್ಗೆ ಪೋಷಕರಿಗೆ ಮಾಹಿತಿ ನೀಡಿದರು. ತಮ್ಮ ಕುಟುಂಬಗಳಿಗೆ ಮರಳಿ ಬಂದ ಮಕ್ಕಳು ಮತ್ತು ನಂತರದ ಆರೈಕೆಯಲ್ಲಿರುವ ಮಕ್ಕಳು ಪೋಷಣೆ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಬೆಂಬಲವನ್ನು ಪಡೆಯುತ್ತಾರೆ ಎಂದು ಅವರು ವಿವರಿಸಿದರು.

ಬ್ರದರ್ ಜುಬಿನ್ ಕೂಡ ಸಭೆಯಲ್ಲಿ ಭಾಗವಹಿಸಿದ್ದರು. ಒಟ್ಟು ೬೨ ಪೋಷಕರು ಅಧಿವೇಶನದಲ್ಲಿ ಭಾಗವಹಿಸಿದ್ದರು.

## ಫೋಸ್ಟರ್ ಕೇರ್ ಸಂಸ್ಥೆ/ಪಾಲುದಾರರಿಗೆ ರಾಜ್ಯ ಸಮಾಲೋಚನೆ ಮತ್ತು ಕಾರ್ಯಗಾರ

ಮಾರ್ಚ್ ೨೫, ೨೦೨೬ರಂದು ಬೆಂಗಳೂರಿನ ಬೊಸ್ಕೊ ಮನೆಯಲ್ಲಿ ಫೋಸ್ಟರ್ ಕೇರ್ ಸಂಸ್ಥೆ/ಪಾಲುದಾರರ ಸಭೆಗಾಗಿ ರಾಜ್ಯ ಸಮಾಲೋಚನೆ ಮತ್ತು ಕಾರ್ಯಗಾರವನ್ನು ಆಯೋಜಿಸಲಾಯಿತು. ಬೊಸ್ಕೊ ಬೆಂಗಳೂರಿನ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ ಅವರು ಬೊಸ್ಕೊ ಸಂಸ್ಥೆಯ ಚಟುವಟಿಕೆಗಳು ಮತ್ತು ಫೋಸ್ಟರ್ ಕೇರ್ ಮೈಲಿಗಲ್ಲುಗಳನ್ನು ಹಂಚಿಕೊಂಡರು ಮತ್ತು ಐಸಿಪಿಎಸ್ ನಿರ್ದೇಶಕರೊಂದಿಗೆ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿರುವ ಬಗ್ಗೆ ಮಾಹಿತಿ ನೀಡಿದರು ಹಾಗೆಯೇ ಪಾಲುದಾರರ ಜವಾಬ್ದಾರಿಗಳ ಬಗ್ಗೆಯೂ ತಿಳಿಸಿದರು.

ಬೆಂಗಳೂರು ದಕ್ಷಿಣ ಮತ್ತು ಪಶ್ಚಿಮ ವಿಭಾಗದ ಜಿಲ್ಲಾ ಮಕ್ಕಳ ಸಂರಕ್ಷಣಾ ಅಧಿಕಾರಿ ಶ್ರೀಮತಿ ಆಶಾ ಅವರು ಆಶಾ ಕಾರ್ಯಕರ್ತರು ಮತ್ತು ಅಂಗನವಾಡಿ ಶಿಕ್ಷಕರಿಗೆ ಅವರ ಸಮರ್ಪಿತ ಸೇವೆಗಾಗಿ ಕೃತಜ್ಞತೆ ಸಲ್ಲಿಸಿದರು. ಮಕ್ಕಳನ್ನು ಕೌಟುಂಬಿಕ ಪರಿಸರದಲ್ಲಿ ಕಾನೂನುಬದ್ಧವಾಗಿ ಇರಿಸಬೇಕು ಎಂದು ಅವರು ಒತ್ತಿ ಹೇಳಿದರು ಮತ್ತು ಪೋಷಕರ ಆರೈಕೆಯ ಬಗ್ಗೆ ಜಾಗೃತಿ ಮೂಡಿಸಲು ಪಾಲುದಾರರನ್ನು ಪ್ರೋತ್ಸಾಹಿಸಿದರು. ಬೆಂಗಳೂರು ಉತ್ತರ ವಿಭಾಗದ ಜಿಲ್ಲಾ ಮಕ್ಕಳ ಸಂರಕ್ಷಣಾ ಅಧಿಕಾರಿ ಶ್ರೀಮತಿ ನಾಗವೇಣಿರವರು ದತ್ತು ಸ್ವೀಕಾರವು ಸಾಮಾನ್ಯವಾಗಿ ಸುದೀರ್ಘವಾದ ಪ್ರಕ್ರಿಯೆಯಾಗಿದೆ, ಆದರೆ ಫೋಸ್ಟರ್ ಕೇರ್ ಮಗುವನ್ನು ಕುಟುಂಬ ಪರಿಸರದಲ್ಲಿ ಇರಿಸಲು ತ್ವರಿತ ಮಾರ್ಗವನ್ನು ಒದಗಿಸುತ್ತದೆ ಎಂದು ತಿಳಿಸಿದರು.





ಬ್ರೆಡ್ಸ್ನ ನಿರ್ದೇಶಕರಾದ ಫಾ. ಸಿಜುರವರು ಮಾತನ್ನಾಡಿ ಫೋಸ್ಟರ್ ಕೇರ್ ಉಪಕ್ರಮಗಳನ್ನು ಬಲಪಡಿಸುವಲ್ಲಿ ಪಾಲುದಾರರ ಸಭೆಗಳ ಪ್ರಮುಖ ಪಾತ್ರವನ್ನು ಒತ್ತಿ ಹೇಳಿದರು. ಅಂತಹ ಸಭೆಗಳ ನಂತರ ಅನುಸರಣೆಯ ಮಹತ್ವದ ಬಗ್ಗೆ ತಿಳಿಹೇಳುತ್ತಾ ಮಧ್ಯಸ್ಥಗಾರರು ಇತರರೊಂದಿಗೆ ಪರಿಕಲ್ಪನೆಯನ್ನು ಹಂಚಿಕೊಂಡಿದ್ದಾರೆ ಮತ್ತು ಸಂಭಾವ್ಯ ಪೋಷಕರು ಮತ್ತು ಮಕ್ಕಳನ್ನು ಗುರುತಿಸಲು ಕ್ರಮಗಳನ್ನು ಕೈಗೊಂಡಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳಬೇಕು ಎಂದೂ ತಿಳಿಸಿದರು.

ಶ್ರೀ ಶಿವಮಲ್ಲು, ಸಂಯೋಜಕರು, ಫೋಸ್ಟರ್ ಕೇರ್, ಭಾಗವಹಿಸಿದವರನ್ನು ಸ್ವಾಗತಿಸಿದರು, ಮತ್ತು ಶ್ರೀ ಒಬಲೇಶ್, ಸೋಶಿಯಲ್ ಮೊಬಿಲೈಜರ್, ಧನ್ಯವಾದಗಳನ್ನು ಅರ್ಪಿಸಿದರು. ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ತುಮಕೂರಿನ ಎಪ್ಪತ್ತೆಂಟು ಪಾಲುದಾರರು ಸಭೆಯಲ್ಲಿ ಭಾಗವಹಿಸಿದ್ದರು.

## ಬೊಸ್ಕೊ ಸುಮ್ಮನಹಳ್ಳಿಯಲ್ಲಿ ಗ್ರಂಥಾಲಯ ಉದ್ಘಾಟನೆ



ಗ್ರಂಥಾಲಯದ ಉದ್ಘಾಟನಾ ಸಮಾರಂಭವನ್ನು ಮಾರ್ಚ್ ೩೧ರಂದು ಬೊಸ್ಕೊ ಸುಮ್ಮನಹಳ್ಳಿಯಲ್ಲಿನ ಸಂತೋಷದಾಯಕ ಮತ್ತು ಅರ್ಥಪೂರ್ಣ ವಾತಾವರಣದಲ್ಲಿ ನಡೆಸಲಾಯಿತು. ಹೊಸ ಗ್ರಂಥಾಲಯವನ್ನು ಔಪಚಾರಿಕವಾಗಿ ಫಾ. ಮ್ಯಾಥ್ಯೂ ವಡಕೆಲ್, ಎಸ್.ಡಿ ಬಿ., ಫಾ. ವರ್ಗೀಸ್ ಪಲ್ಲಿಪುರಂ ಉದ್ಘಾಟಿಸಿದರು.



ಗ್ರಂಥಾಲಯವು ಪುಸ್ತಕಗಳು ಮತ್ತು ಕಲಿಕಾ ಸಾಮಗ್ರಿಗಳೊಂದಿಗೆ ಸುಸಜ್ಜಿತವಾಗಿದ್ದು, ಓದಲು ಮತ್ತು ಅಧ್ಯಯನಕ್ಕೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಿದೆ. ಮಕ್ಕಳು ಮತ್ತು ಸಿಬ್ಬಂದಿಗಳ ಉಪಸ್ಥಿತಿಯಿಂದ ಕಾರ್ಯಕ್ರಮವು ರಂಗುರಂಗಾಗಿತ್ತು.

# BOSCO HOMELINK MONTHLY REPORT

| | Male | Female | Total |
|---|---|---|---|
| Children rescued | 79 | 24 | 103 |
| Service provided | 42 | 14 | 56 |
| Grand Total | 121 | 38 | 159 |

1. New Children Data of Contact Center/Area:

| | Fresh | | Repeated | | |
|---|---|---|---|---|---|
| Contact Point | Boys | Girls | Boys | Girls | Total |
| Railway Station DCPU Staff | 12 | 05 | 01 | 00 | 18 |
| Bus Stand BMTC | 30 | 02 | 00 | 00 | 32 |
| Bus Stand KSRTC | 19 | 08 | 00 | 00 | 27 |
| BOSCO Yuvodaya | 00 | 00 | 01 | 00 | 01 |
| BOSCO Yuvakendra | 01 | 00 | 00 | 00 | 01 |
| BOSCO Nivas | 02 | 00 | 00 | 00 | 02 |
| BOSCO Nilaya | 01 | 00 | 00 | 00 | 01 |
| BOSCO Vatsalya Bhavan | 00 | 01 | 00 | 00 | 01 |
| CSN | 06 | 01 | 01 | 00 | 08 |
| SMVT | 05 | 07 | 00 | 00 | 12 |
| TOTAL | 76 | 24 | 03 | 00 | 103 |

Final Action Taken

| Placement | Male | Female | Total |
|---|---|---|---|
| Under follow-up in BOSCO Centres | 08 | 07 | 15 |
| Home Placement (CWC R) | 46 | 04 | 50 |
| Direct Home Placement | 12 | 02 | 14 |
| Referred to other institutions | 03 | 02 | 05 |
| TOTAL | 89 | 24 | 103 |

STAY CONNECTED WITH BOSCO

BOSCO

Bangalore Oniyavara Seva Coota

/ BOSCO BENGALURU